ಹುಡುಕಿ ಹೊರಡುವಂತೆ ಮಾಡಿದ್ದು. ಇಲ್ಲಿಯವರೆಗೂ ಓಡಿಬರುವಂತೆ ಮಾಡಿದ್ದು!

ಕಾಕತಾಳೀಯವೊ ಏನೋ ವೀಣೆ ಛಿದ್ರವಾದ ಹಾಗೆ; ಅಪ್ಪ ಸತ್ತ ಹಾಗೆ ಕನಸುಬಿದ್ದ ಮರುದಿನ ಯಾವೊಂದರಲ್ಲಿಯೂ ಆಸಕ್ತಿಯಿರಲಿಲ್ಲ. ಬೆಳಗಾಗುವುದರಲ್ಲಿ ನನಗೆ – ಅಪ್ಪನಿಗೆ ಇಬ್ಬರಿಗೂ ಕೆಂಡದಂಥ ಜ್ವರ. ಮೈಭಾರ. ನಾನು ಎದ್ದಾಗ ಬಿಸಿಲಾಗಲೇ ಝಳಪಿಸುತ್ತಿತ್ತು. ಬೆಳಗಿನ ಜಾವಕ್ಕೇ ಎದ್ದು, ಅಪ್ಪನೊಂದಿಗೆ ಸುನಯನಾ ತೀರಕ್ಕೆ ಅಡ್ಡಾಡಲು ಹೋಗುವುದು ನಿತ್ಯದ ಪರಿಪಾಠ. ಇಂದು ಬಹಳ ಹೊತ್ತಾಗಿತ್ತು. ಮನೆಯಲ್ಲೆಲ್ಲ ಅಪ್ಪನನ್ನು ಹುಡುಕಿದೆ. ತೋಟದಲ್ಲಿದ್ದಾರೆಂದು ಅಮ್ಮ ಹೇಳಿದಳು. ಅಲ್ಲಿಗೇ ಹೋದೆ. ಮೈಸುಡುವ ಜ್ವರದಲ್ಲೂ ಅಪ್ಪ ತೋಟದ ಕೆಲಸದಲ್ಲಿದ್ದರು. ನಾನವರೊಂದಿಗೆ ಜಗಳವಾಡಿ ಮನೆಗೆ ಕರೆತಂದೆ. ಮೂರು ದಿನಗಳ ಕಾಲ ಇಬ್ಬರಿಗೂ ಎಚ್ಚರವಿಲ್ಲದಷ್ಟು ಜ್ವರ. ಅಪ್ಪನ ಆಯುರ್ವೇದದ ಔಷಧಕ್ಕೆ ಒಂದು ವಾರಕ್ಕೆಲ್ಲ ಮತ್ತೆ ಸರಿಹೋದೆವು.

ವಾರಕ್ಕೆ ಪೂರ್ಣಗುಣವಾಗಿದ್ದರೂ ಮೈಯಲ್ಲಿನ್ನೂ ಆಲಸ್ಯ. ವಾರ ಕಾಲದಿಂದ ನಾನು ನನ್ನ ಪ್ರೀತಿಯ ಸ್ವರವನ್ನು ಮುಟ್ಟಿರಲಿಲ್ಲ ಕೂಡ. ಅಂದು ನಾನು ಆಕೆಯನ್ನು ಮುಟ್ಟಿ ಮೈದಡವಿ ಮನಸು ದಣಿವವರೆಗೆ ಅವಳನ್ನು ನುಡಿಸಿದೆ. ವಾರದ ವಿಚಿತ್ರ ಕುದಿಯೆಲ್ಲ ಕರಗಿ ಹೋಗಿ ನಿರಾಳವಾದಂತೆನಿಸಿತು.

ಸಂಜೆ – ಒಬ್ಬಳೇ ತಿರುಗಾಡಿ ಬರಲು ಸುನಯನ ತೀರಕ್ಕೆ ಹೊರಟೆ – ಅಪ್ಪನ ಶಾಲು ಹೊದ್ದು.

ಚೈತ್ರ ಎಲ್ಲ ಎಷ್ಟೊಂದು – ಕಣ್ಣ ಮುಂದಿರುವ ಹಾಗೆ, ನಿಚ್ಚಳವಾಗಿ ಭಯ ಆವರಿಸುತ್ತಿದೆ. ನನಗೇಕೋ ತುಂಬ ಆತಂಕವೆನಿಸುತ್ತಿದೆ. ದಯವಿಟ್ಟು ಅಷ್ಟು ದೂರ ನಿಲ್ಲಬೇಡ. ಹತ್ತಿರ ಬಾ. ಬೆವತಿರುವ ನನ್ನ ಕೈಗಳನ್ನು ಹಿಡಿದುಕೊಂಡು ಸಮಾಧಾನ ಮಾಡು. ವರ್ಷ ವರ್ಷಗಳ ಕಾಲ ಜತನದಿಂದ ಕಾಪಾಡಿದ ಹೂವೊಂದನ್ನು ಚಣದಲ್ಲಿ ಹೊಸಕಿಬಿಡುವ ಕ್ರೌರ್ಯದಲ್ಲಿ ನಲುಗಿದವಳ ಆರ್ತತೆಯಿದು. ಅಸಹಾಯಕತೆಯಲ್ಲಿ ನನಗೆ ಮೈಯಲ್ಲಿ ನಡುಕಹುಟ್ಟುತ್ತದೆ...

ನಾನು ನದಿಯ ಅಲೆಯನ್ನು ಗಮನಿಸುತ್ತ ನಿಂತಾಗಲೇ ಅವನು ಬಂದದ್ದು. ಕತ್ತಲಾವರಿಸತೊಡಗಿ ಮನೆಗೆ ಹೊರಡಬೇಕೆಂಬ ನಿರ್ಧಾರದಲ್ಲಿ ಹಿಂತಿರುಗಿದಾಗ ಅಲ್ಲಿ ಅವನಿದ್ದ. ಅವನ ಹೆಸರೇನು, ಯಾರು ಅವನು? ಇದೆಲ್ಲ ಕೇಳಬೇಡ. ಸೋಗಿನ ವ್ಯಕ್ತಿಗಳಿಗೆ, ನಯಗಾರಿಕೆಯ ಮುಖವಾಡ ಧರಿಸಿದವರಿಗೆ ಪರಿಚಯಿಸುವಂಥ ಯಾವ ವ್ಯಕ್ತಿತ್ವವೂ ಇರುವುದಿಲ್ಲ. ಅವನು ಪರಿಚಯದವನೇ ನನ್ನ ಹಳ್ಳಿಯವನೇ. ನನ್ನೊಂದಿಗೆ ಮಾತಾಡುತ್ತಾ ಸ್ವಲ್ಪದೂರ ಬಂದ. ನಾನೆಂಥ ಮುಗ್ಧಳೆಂದರೆ ಅವನೊಳಗಿನ ಹಂಚಿಕೆಯೊಂದೂ ಅರಿಯದೆ ಸಹಜವಾಗೇ ನಡೆಯತೊಡಗಿದ್ದೆ. ನದಿದಂಡೆಯನ್ನು ದಾಟಿ ಮನೆಸೇರುವ ಪೊದೆಗಳ ದಾರಿ ಬಂದದ್ದೇ ಅವನು ರಾಕ್ಷಸನಾದ. ಪಕ್ಕದಲ್ಲಿ ನಡೆಯುತ್ತಿದ್ದವನು ಎದುರುಬಂದು ನಿಂತ. ಅವನ ಕಣ್ಣಲ್ಲಿ ಕ್ರೌರ್ಯ ಎಷ್ಟಡಗಿತ್ತೆಂದರೆ, ನೋಡಿದ್ದೇ ನಾನು ಓಡಲು ಯತ್ನಿಸಿದೆ. ಆದರೆ ಆಗಲಿಲ್ಲ. ನನಗೆ ಸ್ಮೃತಿ ತಪ್ಪಿತು...

...ಪೊದೆಯಲ್ಲಿ ಬಿದ್ದಿದ್ದೆ. ನಾನು ಎದ್ದಾಗ ಅವನ್ಯಾವಾಗಲೋ ಓಡಿಹೋಗಿದ್ದ. ನನಗಾದ ಆಘಾತಕ್ಕೆ ಕಣ್ಣಲ್ಲಿ ನೀರೂ ಬರಲಿಲ್ಲ. ನನ್ನ ಬಗೆಗೆ ನನಗೆ ಅಸಹ್ಯ. ಮೈಯೆಲ್ಲ ತರಿದಿತ್ತು. ಎದ್ದವಳೇ ಈ ಘಟನೆಗೆ ಸಾಕ್ಷಿಗಳಾರೂ ಬೇಡವೆಂದು ರೋಷದಲ್ಲಿ ಅಕ್ಕಪಕ್ಕ ಬೆಳೆದ ಕುರುಚಲುಗಳನ್ನೆಲ್ಲ ಕಿತ್ತಿ ಬಿಸಾಕಿದೆ. ಅಪ್ಪನ ಶಾಲನ್ನು ನದಿಯ ನೀರಿಗೆ ತೂರಿದೆ. ಹತಾಶೆಯ